ದಿನಾಂಕಃ 29-03-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ದಿಃ 04.10.2018 ರಂದು ಆದ ಆದೇಶದ ಅನ್ವಯ ಮುಂದು ವರೆದ ಪಾಟೀ ಸವಾಲು

ಪಾಟೀ ಸವಾಲು ಶ್ರೀ ಹೆಚ್.ಇ.ಎ.ಕೆ. ವಕೀಲರಿಂದ – ಆರೋಪಿತರ ಪರವಾಗಿ

4. ಶಶಾಂಕ್ ತಂದೆ ಗಿರೀಶ್‌ಗೌಡ, ಹೇರೂರು ಗ್ರಾಮ ಎಂದರೆ ನಾನು ಇರುತ್ತೇನೆ ಎಂದರೆ ಸರಿ. ಈಗ ತೋರಿಸಿದ ನಿ.ಡಿ.2 ಪೋಟೋದಲ್ಲಿ ಈ ಪ್ರಕರಣದ ಪಿರ್ಯಾದಿ ಅನಿಲ್ ಇವರ ಹಿಂಭಾಗದಲ್ಲಿ ಇರುವ ವ್ಯಕ್ತಿ ನಾನು ಎಂದರೆ ಸರಿಯಾಗಿ ಕಾಣುತ್ತಿಲ್ಲ. ಸದರಿ ನಿ.ಡಿ.2 ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ಸಂಘಟನೆಯ ಬಾಬ್ತು ತೆಗೆದಿರುವ ಪೋಟೋ ಎಂದರೆ ಸರಿ. ಅದರಲ್ಲಿ ಇರುವ ವ್ಯಕ್ತಿಗಳು ಸಂಘಟನೆಗೆ ಸೇರಿದ ಪದಾಧಿಕಾರಿಗಳು ಎಂದರೆ ನನಗೆ ಗೊತ್ತಿಲ್ಲ. ಈಗ ತೋರಿಸಿದ ನಿ.ಡಿ.4 ರಲ್ಲಿ ನನ್ನ ಇರುವಿಕೆ ಕಂಡು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ ಮತ್ತು ಪಕ್ಕದಲ್ಲಿ ಇರುವ ವ್ಯಕ್ತಿ ಸಂದೀಪ ಎಂದರೆ ನನಗೆ ಗೊತ್ತಿಲ್ಲ. ಈಗ ತೋರಿಸಿದ ನಿ.ಡಿ.11 ರಲ್ಲಿ ಎಡಭಾಗದಿಂದ ಮೊದಲನೇ ವ್ಯಕ್ತಿ ಎಂದರೆ ಸರಿಯಾಗಿ ಕಾಣುತ್ತಿಲ್ಲ ಮತ್ತು ಮೊದಲನೇ ವ್ಯಕ್ತಿಯ ಪಕ್ಕದಲ್ಲಿ ಇರುವ ವ್ಯಕ್ತಿ ಪುಟ್ಟನಂಜ, ಪ್ರಮೋದ ಮತ್ತು ಸಂದೀಪ ಎಂದರೆ ನನಗೆ ಗೊತ್ತಿಲ್ಲ. ನಾನು ನನಗೆ ಪರಿಚಯ ಇಲ್ಲದವರ ಜೊತೆ ಹಾದಿ ಬೀದಿಯಲ್ಲಿ ಪೋಟೋ ತೆಗೆಸಿಕೊಳ್ಳುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.11 ಪೋಟೋವನ್ನು ರಸ್ತೆಯಲ್ಲಿ ತೆಗೆದಿರುತ್ತದೆ ಎಂದರೆ ಸರಿ. ಈಗ ತೋರಿಸಿದ ನಿ.ಡಿ.12 ಪೋಟೋದಲ್ಲಿ ಬಲಭಾಗದಲ್ಲಿ ನಾನು ಇದ್ದೇನೆ ಎಂದರೆ ಸರಿ ಮತ್ತು ನನ್ನ ಪಕ್ಕದಲ್ಲಿ ಪುಟ್ಟನಂಜ ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಖಾಂಡ್ಯ

ಪ್ರವೀಣನ ಬಗ್ಗೆ ಗೊತ್ತಿಲ್ಲ. ಈಗ ತೋರಿಸುವ ಪೋಟೋದಲ್ಲಿ ಎಡಬಾಗದಲ್ಲಿ ಕೋವಿಯನ್ನು ಎತ್ತಿ ತೋರಿಸುತ್ತಿರುವ ವ್ಯಕ್ತಿ ಯಾರು ಎಂದರೆ ನನಗೆ ಸರಿಯಾಗಿ ಕಾಣುತ್ತಿಲ್ಲ. ಸದರಿ ಪೋಟೋವನ್ನು ನಿ.ಡಿ.15 ಎಂದು ಗುರುತಿಸಲಾಯಿತು.

5. ಈಗ ತೋರಿಸುವ ಇನ್ನೊಂದು ಪೋಟೋದಲ್ಲಿ ನಾನು ಇರುತ್ತೇನೆ. ಅದನ್ನು ನಿ.ಡಿ.16 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ಎಡಭಾಗದಿಂದ 2 ನೇ ವ್ಯಕ್ತಿ ನಾನು ಎಂದರೆ ಸರಿಯಾಗಿ ಗೊತ್ತಾಗುತ್ತಿಲ್ಲ. ಸದರಿ ಪೋಟೋವನ್ನು ನಿ.ಡಿ.17 ಎಂದು ಗುರುತಿಸಲಾಯಿತು. ಈಗ ತೋರಿಸಿದ ಮತ್ತೊಂದು ಪೋಟೋದಲ್ಲಿ ನಾನು ಇರುತ್ತೇನೆ ಎಂದರೆ ಸರಿ. ಸದರಿ ಪೋಟೋವನ್ನು ನಿ.ಡಿ.18 ಎಂದು ಗುರುತಿಸಲಾಯಿತು. ಸದರಿ ನಿ.ಡಿ.18 ನ್ನು ಪೊಲೀಸ್ ಠಾಣೆಯಲ್ಲಿ ಹಾಕಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಮೇಲೆ ಎಷ್ಟು ಕ್ರಿಮಿನಲ್ ಪ್ರಕರಣಗಳು ದಾಖಲಾಗಿರುತ್ತವೆ ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ನಾನು ಎನ್.ಆರ್. ಪುರ ನ್ಯಾಯಾಲಯಕ್ಕೆ ಹೋಗಿರುತ್ತೇನೆ. ನಾನು ಆರೋಪಿಯಾಗಿರುವ ಪ್ರಕರಣಗಳು ಚಿಕ್ಕಮಗಳೂರು ನ್ಯಾಯಾಲಯದಲ್ಲಿ ಒಂದೂ ಇರುವುದಿಲ್ಲ. ಒಂದು ಬೈಕ್ ಗೆ ಸಂಬಂಧಪಟ್ಟ ಅಪಘಾತ ಪ್ರಕರಣದಲ್ಲಿ ನಾನು ನ್ಯಾಯಾಲಯದಿಂದ ಜಾಮೀನು ಪಡೆದಿರುವ ಬಗ್ಗೆ ನೆನಪಿರುತ್ತದೆ. ಚಿಕ್ಕಮಗಳೂರು ಸತ್ರ ನ್ಯಾಯಾಲಯದಿಂದ ಯಾವುದೇ ಪ್ರಕರಣದಲ್ಲಿ ನಾನು ಜಾಮೀನು ಪಡೆದುಕೊಂಡಿರುವುದಿಲ್ಲ. ನನ್ನ ಮೇಲೆ ಬೈಕ್ ಗೆ ಸಂಬಂಧಪಟ್ಟ ಪ್ರಕರಣ ಬಿಟ್ಟರೇ ಬೇರೆ ಪ್ರಕರಣ ಇರುವುದು ನನಗೆ ನೆನಪಿಲ್ಲ. ನಾನು ಯಾವುದೇ ಪ್ರಕರಣದಲ್ಲಿ abscond ಆಗಿರುವ ಬಗ್ಗೆ ಗೊತ್ತಿಲ್ಲ. ನನ್ನನ್ನು ಪೊಲೀಸರು

ಯಾವುದೇ ಪ್ರಕರಣದಲ್ಲಿ ದಸ್ತಗಿರಿ ಮಾಡಿದರೆ ನಾನು ಯಾವ ಪ್ರಕರಣದಲ್ಲಿ ದಸ್ತಗಿರಿ ಮಾಡಿರುತ್ತೀರಿ ಎಂದು ಕೇಳುತ್ತೇನೆ ಎಂದರೆ ನನಗೆ ಆ ತರಹ ಸನ್ನಿವೇಶ ಒದಗಿರುವುದಿಲ್ಲ. ನನ್ನ ಫೋಟೋ ಪೊಲೀಸ್ ಠಾಣೆಯಲ್ಲಿ ಇ ರುವ ಕುರಿತಂತೆ ನಾನು ವಕೀಲರ ಸಹಾಯದಿಂದ ಅದನ್ನು ಪೊಲೀಸ್ ಠಾಣೆಯಿಂದ ತೆಗೆಸಲು ಪ್ರಯತ್ನ ಪಟ್ಟಿರುತ್ತೇನೆ. ಆದರೆ ಅದನ್ನು ಪೊಲೀಸರು ಈಗ ತೆಗೆದಿರುತ್ತಾರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ.

6. ನಾನು ಬಜರಂಗದಳದ ಜಿಲ್ಲಾ ಸಹ ಸಂಚಾಲಕ ಎಂದರೆ ಸರಿಯಲ್ಲ. ಈಗ ತೋರಿಸಿದ ದಿಃ 05.10.2018 ರ ಪ್ರಜಾವಾಣಿ ದಿನ ಪತ್ರಿಕೆಯ ಪುಟ 3 ರಲ್ಲಿ ನನ್ನ ಬಗ್ಗೆ ವರದಿ ಬಂದಿರುವ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಜಗ್ಗನ ಬೈಕ್ ಕಳ್ಳತನವಾಗಿದ್ದು, ಅದನ್ನು ನಾನು ಖರೀದಿ ಮಾಡಿದ್ದರ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಮತ್ತು ಸದರಿ ಬೈಕ್ ನ್ನು ಪೊಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಪ್ರಜಾವಾಣಿ ಪತ್ರಿಕೆಯ ಪುಟ 3 ರಲ್ಲಿ ಪ್ರಕಟವಾದ ವರದಿಯನ್ನು ನಿ.ಡಿ.19 ಎಂದು ಗುರುತಿಸಲಾಯಿತು. ನಾನು ಅಬ್ದುಲ್ ಹಮೀದ್ ಎನ್ನುವ ವ್ಯಕ್ತಿಯನ್ನು ಅಡ್ಡಗಟ್ಟಿ ಹಲ್ಲೆ ಮಾಡಿ, ದರೋಡೆ ಮಾಡಿರುವ ಬಾಬ್ತು ಕುರಿತು ನನ್ನ ಮೇಲೆ ಯಾವುದೇ ಪ್ರಕರಣ ಆಗಿರುವುದಿಲ್ಲ.

7. ಬಾಳೆಹೊನ್ನೂರು ಪೊಲೀಸರು ಅಬ್ದುಲ್ ಹಮೀದ್ ಎನ್ನುವವರು ಕೊಟ್ಟ ಬಾಬ್ತು ಕ್ರೈಂ ನಂಬರ್ 22/2018 ರಲ್ಲಿ ನಮೂದಿಸಿರುವ ಅಪರಾದ ಕಲಂಗಳ ಅನ್ವಯ ನನ್ನ ಮೇಲೆ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ. ಸದರಿ ಪ್ರಕರಣದಲ್ಲಿ ನಾನು ಚಿಕ್ಕಮಗಳೂರಿನ ಸತ್ರ ನ್ಯಾಯಾಲಯದಿಂದ ನಿರೀಕ್ಷಣ ಜಾಮೀನು

ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಇನ್ನೊಂದು ಕೇಸಿನಲ್ಲಿ ನಾನು ಆರೋಪಿಯಾಗಿದ್ದರಿಂದ ಈಗ ನಾನು ಸಾಕ್ಷಿ ನುಡಿಯುತ್ತಿರುವ ಪ್ರಕರಣದಲ್ಲಿ ಪದೇ ಪದೇ ಗೈರು ಹಾಜರಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ಹಿಂದೆ 2 ಸಲ ನ್ಯಾಯಾಲಯಕ್ಕೆ ಬಂದಿದ್ದರು ಕೂಡ ಪೊಲೀಸರು ನನ್ನನ್ನು ಬಂದಿಸುತ್ತಾರೆ ಎನ್ನುವ ಕಾರಣದಿಂದ ನಾನು ನ್ಯಾಯಾಲಯದಿಂದ ವಾಪಸ್ಸು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಈಗ ತೋರಿಸಿದ ಪೋಟೋಗಳಲ್ಲಿ ನಾನು, ನನ್ನ ಸ್ನೇಹಿತರಿದ್ದು ಮತ್ತು ನಾವೆಲ್ಲರು ಬಜರಂಗದಳಕ್ಕೆ ಸೇರಿದವರಾಗಿದ್ದರು ಕೂಡ ಸೇರಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸೇರಿದಂತೆ ಇತರರು ಬಾಳೆಹೊನ್ನೂರಿನಲ್ಲಿ ಗೋ ರಕ್ಷಕರ ಹೆಸರಿನಲ್ಲಿ ದಾಂದಲೆ ಪುಂಡಾಟಿಕೆ ಮಾಡುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾಃ